ಶ್ರೀ ಎಂ. ಸಿ. ನಾಣಯ್ಯ (ಸಾರಿಗೆ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ಈಗ ಒಂದು ಬಸ್ಸು ವಿಟ್ಲ ನಗರದ ಮುಖಾಂತರ ಬೆಂಗಳೂರು ಕಾಸರಗೋಡು ಎಂದು ಒಂದು ಎಕ್ಸ್‌ಪ್ರೆಸ್ಸ್ ಸರ್ವೀಸ್ ಇದೆ. ಅದು ಬೆಂಗಳೂರಿನಿಂದ ರಾತ್ರಿ 9.30 ಗಂಟೆಗೆ ಹೊರಟು ಕಾಸರಗೋಡನ್ನು ಬೆಳಿಗ್ಗೆ 7.45ಗಂಟೆಗೆ ತಲುಪುತ್ತದೆ.ಇದು ವಿಟ್ಲಕ್ಕೆ ತಲುಪುವ ಸಮಯ 7 ಗಂಟೆಗೆ ಮತ್ತೆ ಕಾಸರಗೋಡಿನಿಂತ ರಾತ್ರಿ 7.15ಗಂಟೆಗೆ ಬಿಟ್ಟರೆ ಅದು ಬೆಂಗಳೂರನ್ನು ಮಾರನೇ ದಿವಸ ಬೆಳಿಗ್ಗೆ 5.45 ಗಂಟೆಗೆ ಬಂದು ತಲುಪುತ್ತದೆ. ಇದಕ್ಕಿಂತ ಮುಂಚೆ ಡೀಲೆಕ್ಸ್ ಬಸ್ ಆಪರೇಟ್ ಆಗುತ್ತಾ ಇತ್ತು. ಆದರೆ ಅದಕ್ಕೆ ಪ್ರಯಾಣಿಕರ ಸಂಖ್ಯೆ ಕೂಡ ಕಡಿಮೆಯಾಗಿದ್ದರಿಂದ, ಅದರ ಸೌಲಭ್ಯವನ್ನು ಪಡೆಯಲು ಪ್ರಯಾಣಿಕರು ಪಡೆಯಲು ಮುಂದೆ ಬರಲಿಲ್ಲ. ಆ ಸಂದರ್ಭದಲ್ಲಿ ಡೀಲಕ್ಸ್ ಬಸ್ಸನ್ನು ಎಕ್ಸ್‌ಪ್ರೆಸ್ ಬಸ್ಸಾಗಿ ಕನ್‌ವರ್ಟ್ ಮಾಡಿದ್ದೇವೆ. ಈಗ ಈ ಬಸ್ಸು ಓಡಾಡುತ್ತಾ ಇದೆ. ಇನ್ನು ಮಾನ್ಯ ಸದಸ್ಯರು ಕೇಳಿರುವಂಥಾದ್ದು ಅವರ ಕ್ಷೇತ್ರವಾದ ವಿಟ್ಲ ಕ್ಷೇತ್ರದಿಂದ ನೇರವಾಗಿ ಬೆಂಗಳೂರಿಗೆ ಒಂದು ಬಸ್ಸು ಕೊಡಿ ಎಂದು ಕೇಳುತ್ತಿದ್ದಾರೆ. ಅವರು ಕೇಳುವುದರಲ್ಲಿ ತಪ್ಪು ಇಲ್ಲ. ಅವರು ಬರುವಂತಹ ಸಂದರ್ಭದಲ್ಲಿ ಅವರ ಕ್ಷೇತ್ರ ಗಡಿಪ್ರದೇಶವಾಗಿರುವುದರಿಂದ ಬೆಂಗಳೂರಿನಿಂದ ವಿಟ್ಲಕ್ಕೆ ನೇರವಾಗಿ ಒಂದು ಬಸ್ಸು ಕೊಡಿ ಎಂದು ಕೇಳಿದ್ದಾರೆ. ಆದರೆ ಕೆಲವು ಸಂದರ್ಭದಲ್ಲಿ ಬಸ್ಸುಗಳನ್ನು ಹಾಕಬೇಕಾದರೆ ಎಕನಾಮಿಕಲಿ ನಾವು ವರ್ಕ್ ಔಟ್ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಅಲ್ಟ್ರಾ ಡಿಲಕ್ಸ್ ಬಸ್ಸು ಹಾಕಬೇಕೆಂದು ಕೇಳಿದ್ದಾರೆ. ಆದುದರಿಂದ ಇದರ ಎಕನಾಮಿಕಲಿ ವರ್ಕ್ ಔಟ್ ಮಾಡಿದರೆ ಬ್ರೇಕ್ ಇವನ್ ಆಗುತ್ತದೆನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ನೇರವಾದ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ಅವರ ಕ್ಷೇತ್ರದಿಂದ ಬೆಂಗಳೂರಿಗೆ ಬರುವುದಕ್ಕೆ ಗಡಿ ಪ್ರದೇಶವಾಗಿರುವುದರಿಂದ ಬಸ್ಸು ಕೊಡುವಂತಹ ಅವಶ್ಯಕತೆ ಇದೆಯೆಂದು ಹೇಳಿದ್ದಾರೆ. ಇದರ ಬಗ್ಗೆ ಸರ್ವೆ ಮಾಡುವಂತಹ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ. ಅದನ್ನು ಸರ್ವೆ ಮಾಡಿ ಇದರ ಫೀಜಿಬಿಲಿಟಿಯನ್ನು ವರ್ಕ್‌ಔಟ್ ಮಾಡಿ ಮಾನ್ಯ ಸದಸ್ಯರು ಎತ್ತಿರುವಂತಹ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಏನು ಕ್ರಮವನ್ನು ತೆಗೆದುಕೊಳ್ಳುತ್ತೇವೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇವೆ.

ಸಾವಯವ ಗೊಬ್ಬರದ ಬಳಕೆ

184 - ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಾವಯವ ಗೊಬ್ಬರ ಬಳಕೆಯಿಂದ ರೈತರ ಉತ್ಪಾದಕತೆಯ ಮೇಲಾಗುವ ಪರಿಣಾಮ ಕುರಿತು ವೈಜ್ಞಾನಿಕ ಅಧ್ಯಯನ ನಡೆದಿದೆಯೇ ನಡೆದಿದ್ದರೆ ವಿವರ ನೀಡಿರಿ.*

ಆ) *ಸಾವಯವ ಕೃಷಿ ಪದ್ಧತಿಯಲ್ಲಿ ರೈತನ ವೆಚ್ಚ ತಗ್ಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಇ) *ಸಾವಯವ ಗೊಬ್ಬರ ಬಳಕೆ ಪದ್ಧತಿ ಜನಪ್ರಿಯಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?*

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳು ಈ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಸಿದೆ.

ದೀರ್ಘಕಾಲ ಸಾವಯವ ಗೊಬ್ಬರ ಬಳಕೆಯಿಂದ ಭೂ ಫಲವತ್ತತೆ ಹೆಚ್ಚುವುದಲ್ಲದೆ ಕೃಷಿ ಉತ್ಪಾದಕತೆ ಕ್ರಮೇಣ ಹೆಚ್ಚಾಗಿರುವುದು ಈ ಅಧ್ಯಯನದಿಂದ ಕಂಡುಬಂದಿದೆ.

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಸಾವಯವ ಗೊಬ್ಬರದ ಬಳಕೆಯನ್ನು ಜನಪ್ರಿಯಗೊಳಿಸಲು ಸರ್ಕಾರವು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇವುಗಳಲ್ಲಿ ಮುಖ್ಯವಾಗಿ ಎರೆ ಹುಳು ಗೊಬ್ಬರ ತಯಾರಿಕೆ, ಜಪಾನೀ ಪದ್ಧತಿಯಲ್ಲಿ ಕಾಂಪೋಸ್ಟ್ ತಯಾರಿಕೆ, ಹಸಿರೆಲೆ ಗೊಬ್ಬರದ ಬೀಜ ವಿತರಣೆ ಸಂಪದ್ಭರಿತ ಕಾಂಪೋಸ್ಟ್ ವಿತರಣೆ ಇವೇ ಮುಂತಾದವುಗಳಾಗಿವೆ.

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ತಾವು ಉತ್ತರದಲ್ಲಿ ದೀರ್ಘಕಾಲ ಸಾವಯವ ಗೊಬ್ಬರವನ್ನು ಉಪಯೋಗಿಸುವುದರಿಂದ ಭೂ ಫಲವತ್ತತೆ ಹೆಚ್ಚುವುದೆಂದು ಮತ್ತು ಕೃಷಿ ಉತ್ಪಾದನೆಯು ಹೆಚ್ಚುವುದೆಂದು ಅಧ್ಯಯನದಿಂದ ಕಂಡು ಬಂದಿದೆ ಎಂದು ಹೇಳಿದ್ದೀರಿ. ಈ ಸಾವಯವ ಗೊಬ್ಬರ ಮತ್ತು ಎರೆಹುಳು ಗೊಬ್ಬರವನ್ನು ಹೆಚ್ಚು ಉಪಯೋಗ ಮಾಡುವುದಕ್ಕೆ ಈಗ ಕೇಂದ್ರ ಸರ್ಕಾರ ರಾಸಾಯನಿಕ ಗೊಬ್ಬರ ಹೇಗೆ ಸಬ್ಸಿಡಿಯನ್ನು ಕೊಡುತ್ತಿದೆ. ಆ ರೀತಿಯಲ್ಲಿ ಸಾವಯವ ಗೊಬ್ಬರಕ್ಕೂ ಕೇಂದ್ರಸರ್ಕಾರ ಸಬ್ಸಿಡಿಯನ್ನು ಕೊಡುವ ಹಾಗೆ ಒತ್ತಾಯ ಮಾಡುತ್ತೀರಾ ಎಂಬುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ.

ಎರಡನೆಯದು, ಈಗ ಎರೆಹುಳುವಿನಿಂದ ಕಾಂಪೋಸ್ಟ್ ಮಾಡುವುದಕ್ಕೆ ಜವಹಾರ್ ರೋಜ್‌ಗಾರ್‌ಯೋಜನೆ ಮತ್ತು ಇಎಎಸ್‌ನಲ್ಲಿ ಲೇಬರ್ ಕಂಪೊನೆಂಟ್ ಏನಿರುತ್ತದೆ, ಈ ಲೇಬರ್ ಕಂಪೊನೆಂಟ್ ಖರ್ಚು ಅವಕ್ಕೆ ಏನು ಬರುತ್ತದೆ ಅದನ್ನು ದಯವಿಟ್ಟು ತಾವು ರೈತರಿಗೆ ಒದಗಿಸುವುದಕ್ಕಾಗುತ್ತದೆಯೋ ಹೇಗೆ? ಮೂರನೆಯದು, ರಾಸಾಯನಿಕದಿಂದ ಮತ್ತು ಕ್ರಿಮಿನಾಶಕದಿಂದ ಭೂಮಿಯ ಫಲವತ್ತತೆ ಕಡಿಮೆಯಾಗಿ ನಮ್ಮ ಇಳುವರಿ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೊ ಹೇಗೆ? ಬಂದಿದ್ದರೆ ರಾಸಾಯನಿಕ ಗೊಬ್ಬರಕ್ಕೆ ಕೊಡುವ ಸಬ್ಸಿಡಿಯನ್ನು ನಿಲ್ಲಿಸುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರುತ್ತೀರಾ ಹೇಗೆ?

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಈಗ ಇದು ಪ್ರಾರಂಭದ ಹಂತದಲ್ಲಿದೆ. ನಾವು ನ್ಯಾಚುರಲ್ ಫಾರ್ಮಿಂಗ್ ಪ್ರಾರಂಭದ ಹಂತದಲ್ಲಿದ್ದೇವೆ ಕಳೆದ ಹದಿನೆಂಟು ವರ್ಷಗಳಿಂದ ನಮ್ಮ ಸಂಶೋಧನೆಯ ಪ್ರತಿಫಲವನ್ನು ನಾವು ಉತ್ತರದಲ್ಲಿ ಕೊಟ್ಟಿದ್ದೇವೆ. ಈಗ ಇದು ರೈತರಲ್ಲಿ ಹೆಚ್ಚು ಹೆಚ್ಚು ಬಳಕೆಯಲ್ಲಿ ಬರುವುದಕ್ಕೆ ಇಲಾಖೆ ಕಾರ್ಯಕ್ರಮವನ್ನು ಕೂಡ ಹಾಕಿಕೊಂಡಿದೆ. ಶೇಕಡ 50ರಷ್ಟು ರಿಯಾಯಿತಿಯನ್ನು ಪ್ರಾತೇಕ್ಷಕೆ ಮಾಡತಕ್ಕಂಥವರಿಗೆ ಕೊಡುವ ಯೋಜನೆಯೂ ಸಹ ಇದೆ, ಇದನ್ನು ಮಾಡುತ್ತಿದ್ದೇವೆ. ಕೇಂದ್ರಕ್ಕೆ ಕೃಷಿ ಇಲಾಖೆಯಿಂದ ರಾಸಾಯನಿಕ ಗೊಬ್ಬರಗಳಿಗೆ ಕೊಡುತ್ತಿರುವ

ರೀತಿಯಲ್ಲಿ ಇದಕ್ಕೆ ರಿಯಾಯಿತಿಯನ್ನೂ ಕೂಡ ಕೊಡಬೇಕೆನ್ನುವುದನ್ನು ಕೇಳಿದ್ದಾರೆ. ಅದಕ್ಕೆ ರಾಜ್ಯ ಸರ್ಕಾರದಿಂದ ನಮ್ಮದೇನೂ ಅಭ್ಯಂತರವಿಲ್ಲ ನಾವು ಆ ಪ್ರಯತ್ನವನ್ನು ಮಾಡುತ್ತೇವೆ. ಮತ್ತೆ ಕಾಂಪೋಸ್ಟ್ ಮಾಡುವುದಕ್ಕೆ, ಈ ಉದ್ಯೋಗ ದೃಢೀಕರಣ ಯೋಜನೆ ಬಾಬುಗಳಲ್ಲಿ ಹಣವನ್ನು ಒದಗಿಸುತ್ತೀರಾ ಎನ್ನುವುದನ್ನೂ ಕೂಡ ಕೇಳಿದ್ದಾರೆ. ಬಹುಶಃ ಸದಸ್ಯರಿಗೂ ಗೊತ್ತಿದೆ, ಈಗಾಗಲೇ ನಮ್ಮಲ್ಲಿ ನಿರ್ಮಲ ಕರ್ನಾಟಕ ಯೋಜನೆಯನ್ನು ಕಾರ್ಯಗತ ಮಾಡುತ್ತಿದ್ದೇವೆ. ಅದರಲ್ಲೂ ಮನುಷ್ಯನ ಮಲಮೂತ್ರವನ್ನು ಒಂದು ಕಡೆ ಶೇಖರಣೆ ಮಾಡುವುದಕ್ಕೆ ಒಂದು ವ್ಯವಸ್ಥೆ ಇದೆ. ಆದರೆ ಅದರಲ್ಲಿ ಕಾಂಪೋಸ್ಟ್‌ಗೆ ಆದ್ಯತೆಯನ್ನು ಕೊಟ್ಟಿಲ್ಲ, ಅದನ್ನು ಒಪ್ಪುತ್ತೇನೆ. ನಮ್ಮ ಹೊಸ ಕೃಷಿ ನೀತಿಯಲ್ಲೂ ಕೂಡ ಇದನ್ನು ನಾವು ಹೇಳಿದ್ದೇವೆ, ಇದಕ್ಕೆ ಪ್ರಾಧಾನ್ಯತೆ ಕೊಡಬೇಕೆನ್ನುವ ನೀತಿಯನ್ನು ಒಪ್ಪಿದ್ದೇವೆ. ನಾನು ಮಾನ್ಯ ಪಂಚಾಯತ್ ರಾಜ್ ಸಚಿವರ ಜೊತೆ ಈ ಕಾರ್ಯಕ್ರಮಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಮಾತನಾಡುತ್ತೇನೆ. ಮತ್ತು ರಸಾಯನಿಕ ಗೊಬ್ಬರಗಳಿಗೆ ಕೊಡುವ ಸಬ್ಸಿಡಿಯನ್ನು ನಿಲ್ಲಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಬರೆಯುತ್ತೀರಾ ಎಂದು ಕೇಳಿದ್ದಾರೆ, ಅದನ್ನು ಮಾಡುವುದು ಕಷ್ಟವಿದೆ. ಕಾರಣವೇನೆಂದರೆ, ಒಂದೇ ಸಾರಿ ರಾಜ್ಯದಲ್ಲಿರುವ ಅಥವಾ ರಾಷ್ಟ್ರದಲ್ಲಿರುವ ಎಲ್ಲಾ ರೈತರು ರಸಾಯನಿಕ ಗೊಬ್ಬರಗಳನ್ನು ಬಿಟ್ಟು ಈ ಫರ್ಟಿಲೈಸರ್ ಇತರೆ ಬೇರೆ ಬೇರೆ ವಿಧಾನದ ಗೊಬ್ಬರಗಳನ್ನು ಉಪಯೋಗಿಸುವುದು ಅಭ್ಯಾಸವಾಗುವತನಕ ನಾವು ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ನಮ್ಮ ಉತ್ಪಾದನೆ ಕಡಿಮೆಯಾಗುತ್ತದೆ. ಇವತ್ತು ಆಹಾರದ ಸ್ವಯಂಪೂರ್ಣತೆಯನ್ನು ಸಾಧಿಸಬೇಕಾಗಿರುವ ಸಂದರ್ಭದಲ್ಲಿ ಒಂದೇ ಸಾರಿ ನಾವು ಕೃತಕ ಗೊಬ್ಬರಗಳಿಗೆ ಕೊಡುತ್ತಿರುವ ಸಬ್ಸಿಡಿಯನ್ನು ತೆಗೆದು ಹಾಕಿ ಎನ್ನುವ ಶಿಫಾರಸ್ಸನ್ನು ಯಾವುದೇ ರಾಜ್ಯ ಸರ್ಕಾರ ಮಾಡಿದರೆ ಅದು ಉತ್ಪಾದನೆ ಮೇಲೆ ಪ್ರಭಾವ ಬೀರುವುದರಿಂದ ಅದು ಸಧ್ಯದಲ್ಲಿ ಸಾಧ್ಯವಿಲ್ಲವೆನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಸಾವಯವದಿಂದ ಒಬ್ಬ ರೈತ ಸ್ವಾವಲಂಬಿಯಾಗುತ್ತಾನೆ ಎನ್ನುವ ಕಾನ್ಸೆಪ್ಟ್‌ನಲ್ಲಿ ಸ್ವದೇಶಿ ನೀತಿಗೆ ಹೆಚ್ಚಿನ ಆದ್ಯತೆ ಬರುವುದರಿಂದ ಕೇಂದ್ರ ಸರ್ಕಾರ ಸ್ವದೇಶಿ ನೀತಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವ ಒಂದು ಆಶ್ವಾಸನೆಯನ್ನು ಕೊಟ್ಟಿರುವುದರಿಂದ ತಾವು ಖಂಡಿತಾ ಸಬ್ಸಿಡಿ ಸಿಗುವಂಥ ರೀತಿಯಲ್ಲಿ ಪ್ರಯತ್ನ ಪಟ್ಟಲ್ಲಿ ಸಾಧ್ಯತೆ ಇರಬಹುದೆನ್ನುವ ವಿಶ್ವಾಸ ನನಗಿದೆ. ತಾವು ರಾಜ್ಯ ಸರ್ಕಾರದ ಮಟ್ಟದಿಂದ ಇದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಅದರ ಜೊತೆಗೆ ವಿಶೇಷವಾಗಿ ರಾಜ್ಯಮಟ್ಟದಲ್ಲಿ, ನಗರ ಮಟ್ಟದಲ್ಲಿ ಮಹಾನಗರಪಾಲಿಕೆ ಮಟ್ಟದ ಕ್ಷೇತ್ರಗಳಲ್ಲಿ ವಿಶೇಷವಾಗಿ ಸಂಗ್ರಹವಾಗುತ್ತಿರುವ ಕಸಗಳಿಂದಲೂ ಕೂಡ ಈ ರೀತಿ ಎರೆಹುಳು ಅಥವಾ ಇನ್ನಿತರ ಕಾಂಪೋಸ್ಟ್ ಗೊಬ್ಬರಗಳನ್ನು ತಯಾರು ಮಾಡಲು ತಾವು ಏನು ಪ್ರೋತ್ಸಾಹ ಕೊಡುತ್ತೀರಿ? ಇದರ ಬಗ್ಗೆಯೂ ಕೂಡ ತಾವು ಸ್ಪಷ್ಟೀಕರಣ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಉಪಾಧ್ಯಕ್ಷರೆ, ಕೇಂದ್ರ ಸರ್ಕಾರದ ಒಂದು ಪುರಸ್ಕೃತ ಯೋಜನೆ ಇದೆ. ಆ ಯೋಜನೆಯಲ್ಲಿ ವರ್ಷದಲ್ಲಿ ಎರಡು, ಮೂರು ನಗರಸಭೆಗಳಿಗೆ, ಮುನಿಸಿಪಾಲಿಟಿಗಳಿಗೆ

ನಗರಪ್ರದೇಶದಲ್ಲಿ ಉತ್ಪಾದನೆಯಾಗುವ ಕಸಕಡ್ಡಿಗಳೇನಿವೆ ಇದನ್ನು ಒಂದು ಕಡೆ ಶೇಖರಣೆ ಮಾಡಿ ಕಾಂಪೋಸ್ಟ್ ಮಾಡಲು ಅವಕಾಶವಾಗುವುದಕ್ಕೆ ಟ್ರ್ಯಾಕ್ಟರ್ ಮುಂತಾದವುಗಳನ್ನು ಒದಗಿಸತಕ್ಕಂಥದ್ದಿದೆ. ಅದನ್ನು ವರ್ಷದಲ್ಲಿ ಎರಡು, ಮೂರು, ನಗರಸಭೆಗಳಿಗೆ ಕೊಡುವುದಕ್ಕೆ ಮಾತ್ರ ಅವಕಾಶವಿದೆ, ಈಗಾಗಲೇ ಪ್ರತಿವರ್ಷ ಸತತವಾಗಿ ಅದನ್ನು ಕೊಡುತ್ತಾ ಬಂದಿದ್ದೇವೆ, ಹೆಚ್ಚಿಗೆ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿಯನ್ನೂ ಕೂಡ ಮಾಡುತ್ತೇವೆ. ಗೊಬ್ಬರದಲ್ಲಿ ಸ್ವದೇಶ, ವಿದೇಶಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ, ಅದು ಯಾವ ರೀತಿ ಸ್ವದೇಶಿನೋ ಅದು ಯಾವ ರೀತಿ ವಿದೇಶಿಯೋ ಅದೇನು ಗೊತ್ತಿಲ್ಲ. ನಮ್ಮ ರಾಜ್ಯದ ರೈತರು ಏನು ಮಾಡುತ್ತಿದ್ದಾರೆ ಅದು ಸ್ವದೇಶಿ ಎಂದು ನಾನಂತೂ ಒಪ್ಪಿಕೊಳ್ಳುತ್ತೇನೆ. ಏನೋ ಸ್ವದೇಶಿ ಪರದೇಶಿ ಎಂದು ಹೊಸದಾಗಿ ಹೇಳುತ್ತಿದ್ದಾರೆ ಅದು ನನಗೆ ಅರ್ಥವಾದ ಮೇಲೆ ನಾವು ಆಲೋಚನೆ ಮಾಡುತ್ತೇವೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಸಭಾಧ್ಯಕ್ಷರೆ, ಮಾನ್ಯ ಕೃಷಿ ಮಂತ್ರಿಗಳು ಸಾವಯವ ಕೃಷಿಯ ಬಗ್ಗೆ ಎಷ್ಟು ಮಾತನಾಡಿದರೂ ಏನೂ ಬೆಳೆಯುವುದಕ್ಕೆ ಸಾಧ್ಯವಿಲ್ಲ. ನಿಜವಾಗಿ ಸರ್ಕಾರಕ್ಕೆ ಸಾವಯವ ಕೃಷಿಯನ್ನು ಬೆಳೆಸಬೇಕೆನ್ನುವ ಭಾವನೆ ಇದ್ದರೆ ಎಲ್ಲಾ ಕಡೆ ಮಾರುಕಟ್ಟೆಯನ್ನು ಪ್ರಾರಂಭ ಮಾಡಿ. ಸಾವಯವ ಕೃಷಿಯಿಂದ ಉತ್ಪಾದನೆ ಮಾಡುವ ಎಲ್ಲಾ ಪದಾರ್ಥಗಳಿಗೆ ಈ ತರಹದ ಬೆಲೆಯನ್ನು ಕೊಡುತ್ತೇವೆ, ತಾವು ಸಾವಯವ ಕೃಷಿಗೆ ಹೆಚ್ಚು ಒತ್ತು ಕೊಡುವ ಕೆಲಸವನ್ನು ಮಾಡಿ ಎಂದು ಮಾರುಕಟ್ಟೆಯನ್ನು ಪ್ರಾರಂಭ ಮಾಡಿ ಆಟೊಮ್ಯಾಟಿಕ್ ಆಗಿ ಸಾವಯವ ಕೃಷಿ ಆಗುತ್ತದೆ. ಬೇಕಾದರೆ ಅವರಿಗೆ ಗುರುತಿನ ಚೀಟಿಯನ್ನು ಕೊಡಬಹುದು, ಅವರು ಉತ್ಪಾದನೆ ಮಾಡಿ ತಂದು ಕೊಡುತ್ತಾರೆ. ಸಾವಯವ ಕೃಷಿಯಿಂದ ತಯಾರು ಮಾಡಿದಂಥ ಪದಾರ್ಥಕ್ಕೂ ಒಂದೇ ಬೆಲೆ, ರಾಸಾಯನಿಕ ಗೊಬ್ಬರದಿಂದ ಉತ್ಪಾದನೆ ಮಾಡಿದಂಥ ಆಹಾರ ಪದಾರ್ಥಗಳಿಗೆ ಒಂದೇ ಬೆಲೆಯಾದರೆ ಸಾವಯವ ಕೃಷಿಯನ್ನು ಯಾರು ಮಾಡುವುದಕ್ಕೆ ಸಾಧ್ಯ? ಆದುದರಿಂದ ಸಬ್ಸಿಡಿಯನ್ನು ಕೊಡುವುದರ ಜೊತೆಗೆ ಮಾರುಕಟ್ಟೆಯನ್ನು ಪ್ರಾರಂಭ ಮಾಡಿದರೆ ಈ ಸಾವಯವ ಕೃಷಿಯನ್ನು ಬೆಳೆಸುವುದಕ್ಕೆ ಸಾಧ್ಯ, ಇಲ್ಲದಿದ್ದರೆ ಬಹಳ ಅನಾನುಕೂಲವಾಗುತ್ತದೆ, ಭೂಮಿ ದಿನೇ ದಿನೇ ಸತ್ವವನ್ನು ಕಳೆದುಕೊಳ್ಳುತ್ತಿದೆ. ಅದರಲ್ಲಿ ರೈತರ ಇನ್‌ವಾಲ್ ಮೆಂಟ್ ಕ್ರಿಯೇಟ್ ಮಾಡಬೇಕಾದರೆ ಏನಾದರೂ ಒಂದು ಮಾರುಕಟ್ಟೆಯನ್ನು ಪ್ರಾರಂಭಿಸಬೇಕು.

ಶ್ರೀ ಸಿ. ಬೈರೇಗೌಡ : ನಾವು ನಮ್ಮ ಹೊಸ ಕೃಷಿ ನೀತಿಯಲ್ಲೂ ಕೂಡ ಹೇಳಿದ್ದೇವೆ, ಸಾವಯವ ಕೃಷಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆನ್ನುವ ನೀತಿಯನ್ನು ಒಪ್ಪಿದ್ದೇವೆ. ಮತ್ತು ನಮ್ಮ ಸಾಮಾಜಿಕ ಅರಣ್ಯ ಕಾರ್ಯಕ್ರಮದಲ್ಲಿ ಮರಗಿಡಗಳನ್ನು ನೆಡತಕ್ಕಂಥದ್ದರಲ್ಲಿ ಕನಿಷ್ಟ ಶೇಕಡ 50ರಷ್ಟು ಈ ಸಾವಯವ ಕೃಷಿಗೆ ಅನುಕೂಲವಾಗುವ ಗಿಡಮರಗಳನ್ನು ಬೆಳೆಸಬೇಕೆನ್ನುವುದನ್ನು ಒಪ್ಪಿದ್ದೇವೆ, ಆ ರೀತಿಯಾದ ಆಜ್ಞೆಯೂ ಕೂಡ ಸರ್ಕಾರದಿಂದ ಹೊರಟಿದೆ, ಅದನ್ನು ಅರಣ್ಯ ಇಲಾಖೆಯವರು ಕಾರ್ಯಗತ ಮಾಡುತ್ತಿದ್ದಾರೆ, ಮತ್ತೆ, ಮಾರುಕಟ್ಟೆಯನ್ನು ಪ್ರಾರಂಭ ಮಾಡಬೇಕೆನ್ನುವುದನ್ನು ಹೇಳಿದ್ದಾರೆ. ಈಗಾಗಲೇ ನಾನು ಅದರಲ್ಲಿ ಆಸಕ್ತಿ ಇರುವ ಕೆಲವು ಗುಂಪುಗಳನ್ನು ಕರೆದು ಮಾತನಾಡಿದ್ದೇನೆ, ಅವರಿಗೆ ಏನು ಹೇಳಿದ್ದೇನೆ, ಬೆಂಗಳೂರಿನಲ್ಲಿ ನಿಮಗೆ ಪ್ರತ್ಯೇಕವಾಗಿ ಸಾವಯವ ಕೃಷಿಯಿಂದ ಬೆಳೆದಂಥ

ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ, ಸ್ಥಳವನ್ನೂ ಕೂಡ ಕೊಡುತ್ತೇವೆ, ನೀವು ಆ ವ್ಯವಸ್ಥೆಯನ್ನು ಮಾಡಿ ಎನ್ನುವ ಮನವಿಯನ್ನೂ ಕೂಡ ಆ ಸಂಸ್ಥೆಗಳಲ್ಲಿ ಮಾಡಿದ್ದೇನೆ. ಆದರೆ ಅವರ್‍ಯಾರು ಕೂಡ ಮುಂದೆ ಬಂದಿಲ್ಲ. ಬಾರದೇ ಇರುವ ಕಾರಣ ಸರ್ಕಾರ ಅಂಗಡಿ ಇಟ್ಟುಕೊಂಡು ತರಕಾರಿಯನ್ನು ಮಾರಾಟ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಹಾಪ್‌ಕಾಮ್ಸ್ ಹಾಗೂ ಕೆಹೆಚ್‌ಎಫ್ ಸಂಸ್ಥೆ ಇದೆ. ನಮ್ಮ ತೋಟಗಾರಿಕೆ ಸಚಿವರಿಗೆ ತಿಳಿಸಿ ಹಾಪ್‌ಕಾಮ್ಸ್‌ನಲ್ಲೇ ಪ್ರತ್ಯೇಕವಾಗಿ ಸಾವಯವ ಕೃಷಿಯಿಂದ ಬೆಳೆದಂಥ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆನ್ನುವ ಮನವಿಯನ್ನು ಮಾಡಿ ಮಾತುಕತೆ ನಡೆಸುತ್ತೇನೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛಿಪಡುತ್ತೇನೆ.

ಚಿಕ್ಕಮಗಳೂರಿನ ಕೊಳಚೆ ಪ್ರದೇಶಗಳು

185 - ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು)*

ಆ) *ಗುರುತಿಸಿರುವ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಕಾರ್ಯಕ್ರಮಗಳು ಯಾವುವು?*

ಇ) *ಕೊಳಚೆ ನಿರ್ಮೂಲನ ಮಂಡಳಿ ಈ ಪ್ರದೇಶಗಳಿಗಾಗಿ ಮೀಸಲಿಟ್ಟ ಹಣ ಎಷ್ಟು ಹಾಗೂ ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ?*

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ಚಿಕ್ಕಮಗಳೂರು ಜಿಲ್ಲೆಯ ಈ ಕೆಳಗಿನ ತಾಲ್ಲೂಕುಗಳಲ್ಲಿ 51 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದ್ದು, ತಾಲ್ಲೂಕುವಾರು ಮಾಹಿತಿ ಕೆಳಕಂಡಂತೆ ಇದೆ.

ಚಿಕ್ಕಮಗಳೂರು	-	10
ತರೀಕೆರೆ	-	10
ಕಡೂರು	-	31
ಒಟ್ಟು	-	**51**

ಆ) ಮಂಡಳಿಯು ಘೋಷಿತ ಕೊಳಚೆ ಪ್ರದೇಶಗಳಲ್ಲಿ ಮಾತ್ರ ಹಣಕಾಸಿನ ಲಭ್ಯತೆ ಆಧರಿಸಿ ಯೋಜನೆಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತಿದೆ. ಅದರನ್ವಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ ಮೂಲಭೂತ ಸೌಲಭ್ಯಗಳಾದ - ಕುಡಿಯುವ ನೀರು, ಬೀದಿ ದೀಪ, ಚರಂಡಿ, ರಸ್ತೆ, ಶೌಚಾಲಯ, ಸಾಮೂಹಿಕ ಸ್ನಾನಗೃಹ ಮುಂತಾದ ಮೂಲಭೂತ ಸೌಲಭ್ಯಗಳನ್ನು ಆಯ್ದು